- ಜುಲೈ ಸಂಚಿಕೆ ಮಳೆ ಋತುವಿನ ಭಾವ ಬಣ್ಣಕ್ಕೆ ಸಾಕ್ಷಿಯಂತಿದೆ. 'ಎಲ್ಲರನ್ನೂ ತಬ್ಬುವ ಮಳೆಗನ್ನಡಿ' (ಸುಬ್ಬು ಹೊಲೆಯಾರ್) ಅನುಭವ ಕಥನದೊಂದಿಗೆ ಆರಂಭವಾದ ಓದಿನ ಸವಾರಿ ಸಾಹಿತ್ಯದ ರಸದೌತಣವನ್ನೆ ಉಣಬಡಿಸಿತು. ಈ ಲೇಖನ ನಮ್ಮನ್ನು ಬಾಲ್ಯಕ್ಕೆ ಕರೆದೊಯ್ಯಿತಲ್ಲದೇ ಬೆಚ್ಚನೆಯ ಅನುಭವ ನೀಡಿತು.

**ಮಾರುತಿ ಗೋಪಿಕುಂಟೆ, ತುಮಕೂರು**
**ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ**

- 'ಎಲ್ಲರನ್ನೂ ತಬ್ಬುವ ಮಳೆಗನ್ನಡಿ' ಅನುಭವ ಕಥನ ಆಪ್ತವಾಗಿದೆ. ಗ್ರಾಮೀಣ ಭಾಗದಿಂದ ಬಂದವರಿಗೆ ಈ ಅನುಭವ ನೆನಪಾಗುತ್ತದೆ. 'ದ್ಯಾವಕ್ಕನ ಗೌರ್ಮೆಂಟ್ ಮನೆ' (ಎನ್.ಆರ್. ತಿಪ್ಪೇಸ್ವಾಮಿ) ಕಥೆ ಮನಮುಟ್ಟಿತು, ಕಬೀರ ಮತ್ತು ದಾದು ದಯಾಳ್: ರಾಮ ಬಳ್ಳಿಯ ಅಪೂರ್ವ ಪುಷ್ಪಗಳು (ಸಿ.ಎನ್. ರಾಮಚಂದ್ರನ್) ಲೇಖನ ಚೇತೋಹಾರಿಯಾಗಿತ್ತು.

**ಡಿ. ರಾಮನಮಲಿ, ಹರಪನಹಳ್ಳಿ**

- ಮಳೆ ಎಂದರೆ ನಮ್ಮೊಳಗೂ ಸಾವಿರಾರು ಭಾವಗಳು ತೇಲಿಹೋಗುತ್ತವೆ. ಸುಬ್ಬು ಹೊಲೆಯಾರ್ ಅವರ ಅನುಭವಕಥನ ಇಂತಹ ಪರಿಸ್ಥಿತಿಯನ್ನು ದಾಟಿ ಬಂದ ನಮ್ಮೆಲ್ಲರ ಕಥನವೂ ಆಗಿದೆ.

**ರಾಜು ಹಗ್ಗದ, ಬೆಂಗಳೂರು**

- ಹಿಂದಿ ಸಾಹಿತ್ಯ ವಿಮರ್ಶಕ ಪ್ರೊ. ರಾಜಕುಮಾರ್ ಅವರೊಂದಿಗೆ ವಿಕ್ರಮ ವಿಸಾಜಿ ನಡೆಸಿರುವ ಸಂದರ್ಶನದ ವಿಚಾರಧಾರೆ ಹಿಡಿಸಿತು. ಇಂತಹ ಮೇರು ವ್ಯಕ್ತಿತ್ವಗಳನ್ನು ಓದುಗರ ಎದೆಗಿಳಿಸುವ ಮಯೂರದ ಪರಿ ಅನನ್ಯ.

**ಹೆಗ್ಗಾಪುರ ರಾಘವೇಂದ್ರ ಕುಲಕರ್ಣಿ, ಹೊಸಪೇಟೆ**

- ಕಲೀಮ್ ಉಲ್ಲಾ ಅವರ 'ಕಾಡಿಗೆ ಕಣ್ಣು' ಅಂಕಣ ಸೃಜನಶೀಲ ಬರಹಕ್ಕೆ ಮಾದರಿಯಂತಿದೆ. ಈ ಸಂಚಿಕೆಯ ಬರಹವಂತೂ ಮಿಂಚುಳ್ಳಿಯ ಸೂಕ್ಷ್ಮವಾದ ಬದುಕನ್ನೂ, ತನ್ನ ವಂಶವನ್ನುದ್ಧರಿಸುವ ಅದರ ಪಾಲನಾ ಕೌಶಲವನ್ನೂ ಅತೀಸೂಕ್ಷ್ಮವಾಗಿ ಕಟ್ಟಿಕೊಟ್ಟಿದೆ. ಮಿಂಚುಳ್ಳಿಯ ಬದುಕು ಮನುಷ್ಯನಿಗೆ ಕೈದೀವಿಗೆಯಾಗಿದೆ. ಕಲೀಮ್ ಉಲ್ಲಾ ಅವರ ನಿರೂಪಣಾ ಶೈಲಿ ಅನನ್ಯವಾಗಿದೆ.

**ಪಂಚಾಕ್ಷರಯ್ಯ ಕೆ.ಎಂ., ಬೆಂಗಳೂರು**
**ಎಂ.ಜಿ. ರಂಗಸ್ವಾಮಿ ಹಿರಿಯೂರು**

- ಅಮರೇಶ ನುಗಡೋಣಿ ಅವರ 'ಒಂದು ಆತ್ಮಚರಿತ್ರೆಯ ಕಥೆ'ಯಂತಹ ಮನತಟ್ಟಿದ ಕಥೆಯನ್ನು ಹಿಂದೆ ಓದಿರಲಿಲ್ಲ. ಇದೊಂದು ವಿಶಿಷ್ಟ ಕಥಾಹಂದರ.

**ಗುರುರಾಜ ಎಸ್, ದಾವಣಗೆರೆ.**

- ಪಾರಿಗೊಂದು ಪತ್ರ (ಶ್ರೀಧರ ಬಳಗಾರ) ಬರಹ ಸೊಗಸಾಗಿ ಮೂಡಿಬಂದಿದೆ. ಆತ್ಮೀಯತೆಯನ್ನು ಪ್ರಾಣಿಪಕ್ಷಿಗಳಲ್ಲಿಯೂ ಕಂಡುಕೊಳ್ಳಬಹುದೆಂಬ ಸತ್ಯವನ್ನು ಮನ ಮುಟ್ಟುವಂತೆ ಚಿತ್ರಿಸಿದ್ದಾರೆ. ದೂರವಾದಾಗ ಅನುಭವಿಸುವ ಸಂತಾಪದ ಚಿತ್ರಣವೂ ವೇದ್ಯವಾಗುವಂತಿದೆ.

**ಶಂಕರನಾರಾಯಣ ಭಟ್, ಹೊನ್ನಾವರ**
**ಅನು ತ್ರಿವಿಕ್ರಮ್, ಕೇದಿಗೆಮನೆ**

- ಗವಿಸಿದ್ಧ ಹೊಸಮನಿ ಅವರ 'ಬಾವಿ ಸಂಗಮ್ಮಳೂ ಕಂಪುನಿ ಕಥೆಯೂ' ಕಥೆ ತನ್ನ ವಾಸ್ತವದ ಕ್ಯಾನ್ವಾಸಿನಿಂದ ಕಣ್ಣಂಚಿನಲ್ಲಿ ಹನಿಯುದುರುವಂತೆ ಮಾಡಿತು. ಇದೇ ಕಥಾಹಂದರವನ್ನು ಹೊಂದಿರುವ ಅನೇಕ ಕಥೆಗಳನ್ನು, ಅನೇಕ ಕಥೆಗಾರರು ದಾಖಲಿಸಿದ್ದಾರೆ. ಆದರೆ, ಗವಿಸಿದ್ಧ ಅವರ ನಿರೂಪಣಾ ಶೈಲಿಯಿಂದ ಕಥೆ ಆಪ್ತವಾಗುತ್ತದೆ.

**ಪವನಗೌಡ ಕೆ.ಎಂ. ಮಂಡ್ಯ**

- ಈ ಸಂಚಿಕೆಯ ಕವಿತೆಗಳು ಒಂದಕ್ಕಿಂತ ಒಂದು ಸೊಗಸಾಗಿದ್ದವು.

**ದಾಮೋದರ ಕುಲಕರ್ಣಿ, ಬೆಳಗಾವಿ**